1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ: 878/2024</u>

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :
1. ಕುಮಾರಸ್ವಾಮಿ ಡಿ ಬಿನ್ ದೊರೆಸ್ವಾಮಿಗೌಡ 28 ವರ್ಷ
2. ದೊರೆಸ್ವಾಮಿಗೌಡ ಬಿನ್ ಲೇಟ್ ಬಸವೇಗೌಡ 58 ವರ್ಷ
3. ಯಶವಂತ್ ಬಿನ್ ದೊರೆಸ್ವಾಮಿಗೌಡ 35 ವರ್ಷ
4. ನಾಗೇಂದ್ರ ಬಿನ್ ಶಿವಯ್ಯಗೌಡ 48 ವರ್ಷ
5. ನಾಗಮಣಿ ಕೋಂ ದೊರೆಸ್ವಾಮಿಗೌಡ 45 ವರ್ಷ
6. ನೀಲಮ್ಮ ಕೋಂ ನಾಗೇಂದ್ರ 38 ವರ್ಷ
7. ಪವಿತ್ರ ಕೋಂ ಕುಮಾರಸ್ವಾಮಿ ಡಿ 30 ವರ್ಷ

ಎಲ್ಲರ ವಾಸ: ಹಂಪಾಪುರ ಗ್ರಾಮ, ನಂಜನಗೂಡು ತಾಃ

<u>ದೋಷಾರೋಪಣೆ</u>

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ:-28.02.2024 ರಂದು ಸಂಜೆ ಸುಮಾರು 07-00 ಗಂಟೆ ಸಮಯದಲ್ಲಿ ನಂಜನಗೂಡು ತಾಲೋಕು ಕವಲಂದೆ ಪೊಲೀಸ್ ಠಾಣಾ ಸರಹದ್ದು ಹಂಪಾಪುರ ಗ್ರಾಮದ ಬೇಗೂರು ಮಾಲರಸಮ್ಮನ ದೇವಸ್ಥಾನದ ಮುಂಭಾಗ ಹಾಲಿನ ಡೈರಿಯ ಮುಖಂಡರು ಸ್ಥಳ ಪರಿಶೀಲನೆ ಮಾಡುತ್ತಿರುವಾಗ ಚಾಸಾ.1ರವರು ಗ್ರಾಮದ ಮುಖಂಡರ ಜೊತೆ ಹಾಲಿ ಡೈರಿಯ ಜಾಗದ ವಿಚಾರವಾಗಿ ಮಾತನಾಡುತ್ತಿರುವಾಗ, ಸದರಿ ಸ್ಥಳಕ್ಕೆ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡ ಕಾರಣ, ಭಾರತ ದಂಡ ಸಂಹಿತೆಯ ಕಲಂ

143 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೂಗಾಡಿಕೊಂಡು ದಾಂದಲೆ ಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 147 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಕೈಯಲ್ಲಿ ಅಪಾಯಕರ ಆಯುಧಗಳನ್ನು ಹೊಂದಿದ್ದ ಕಾರಣ, ಭಾರತ ದಂಡ ಸಂಹಿತೆಯ ಕಲಂ 148 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 1 ರಿಂದ 3 ನೇ ಆರೋಪಿತರಾದ ನೀವು ಏಕಾಏಕಿ ಚಾಸಾ.1 ರವರನ್ನು ತಳ್ಳಾಡಿ ನೂಕಾಡಿ ನೀನು ಏಕೆ ಬಂದೆ ಎಂದು ಚಾಸಾ.1 ರವರಿಗೆ 1 ನೇ ಆರೋಪಿತರಾದ ನೀವು ಅವರ ಬೆನ್ನಿಗೆ ಮತ್ತು ಮೈ ಕೈ ಗೆ ದೊಣ್ಣೆಯಿಂದ ಹೊಡೆದಿರುತ್ತೀರಿ ಮತ್ತು 2 ನೇ ಆರೋಪಿತರಾದ ನೀವು ಕಲ್ಲಿನಿಂದ ಚಾಸಾ.1 ರವರ ಬೆನ್ನಿಗೆ ಮತ್ತು ಎಡ ಕೈ ನ ಉಂಗುರುದ ಬೆರಳಿಗೆ ಹಾಗೂ ತೋಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ

ಸಂಹಿತೆಯ ಕಲಂ.324 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ. 1 ರವರ ಮೈ ಕೈ ಗೆ ಕೈಗಳಿಂದ ಹೊಡೆದಿರುತ್ತೀರಿ ಮತ್ತು 5 ರಿಂದ 7 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಆರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 3, 5 ರಿಂದ 7 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, 3 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 20.08.2025 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ: 878/2024

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :

1. ಕುಮಾರಸ್ವಾಮಿ ಡಿ ಬಿನ್ ದೊರೆಸ್ವಾಮಿಗೌಡ 28 ವರ್ಷ
2. ದೊರೆಸ್ವಾಮಿಗೌಡ ಬಿನ್ ಲೇಟ್ ಬಸವೇಗೌಡ 58 ವರ್ಷ
3. ಯಶವಂತ್ ಬಿನ್ ದೊರೆಸ್ವಾಮಿಗೌಡ 35 ವರ್ಷ
4. ನಾಗೇಂದ್ರ ಬಿನ್ ಶಿವಯ್ಯಗೌಡ 48 ವರ್ಷ
5. ನಾಗಮಣಿ ಕೋಂ ದೊರೆಸ್ವಾಮಿಗೌಡ 45 ವರ್ಷ
6. ನೀಲಮ್ಮ ಕೋಂ ನಾಗೇಂದ್ರ 38 ವರ್ಷ
7. ಪವಿತ್ರ ಕೋಂ ಕುಮಾರಸ್ವಾಮಿ ಡಿ 30 ವರ್ಷ

ಎಲ್ಲರ ವಾಸ: ಹಂಪಾಪುರ ಗ್ರಾಮ, ನಂಜನಗೂಡು ತಾಃ

: ಆಪಾದನೆ :

ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರ:

2 ನೇ ಆರೋಪಿ ಉತ್ತರ:

3 ನೇ ಆರೋಪಿ ಉತ್ತರ:

4 ನೇ ಆರೋಪಿ ಉತ್ತರ:

5 ನೇ ಆರೋಪಿ ಉತ್ತರ:

6 ನೇ ಆರೋಪಿ ಉತ್ತರ:

7 ನೇ ಆರೋಪಿ ಉತ್ತರ:

ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರ:

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

5 ನೇ ಆರೋಪಿ ಉತ್ತರಃ

6 ನೇ ಆರೋಪಿ ಉತ್ತರಃ

7 ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**